ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1399

ಸದಸ್ಯರ ಹೆಸರು : ಡಾ|| ತೇಜಸ್ವಿನಿ ಗೌಡ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಸಚಿವರು

ಉತ್ತರಿಸುವ ದಿನಾಂಕ : 24.12.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಸಂಚರಿಸುವ ಕೆ.ಎಸ್.ಆರ್.ಟಿ.ಸಿ. ಕೆಂಪು ಬಸ್ಸುಗಳ ಜನ ದಟ್ಟಣೆಯಿಂದ ತುಂಬಿ ಸಂಚರಿಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ	ಕೋವಿಡ್-19ರ ಹಿನ್ನೆಲೆಯಲ್ಲಿ ಘೋಷಿಸಿದ್ದ ಲಾಕ್‌ಡೌನ್ ತೆರವಿನ ನಂತರ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆ ಇದ್ದುದರಿಂದ ಕೋವಿಡ್ ಪೂರ್ವದಲ್ಲಿ ಇದ್ದಂತಹ ಎಲ್ಲಾ ಅನುಸೂಚಿಗಳ ಕಾರ್ಯಾಚರಣೆಯನ್ನು ಒಟ್ಟಿಗೆ ಪ್ರಾರಂಭಿಸದೇ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅವಶ್ಯಕತೆ ಹಾಗೂ ಸಂಚಾರ ದಟ್ಟಣೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಆಯಾ ಮಾರ್ಗಗಳಲ್ಲಿ ಉಂಟಾಗುವ ಪ್ರಯಾಣಿಕರ ಒತ್ತಡವನ್ನು ಪರಿಗಣಿಸಿ, ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ. ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯವು ಅವಶ್ಯಕತೆಗನುಗುಣವಾಗಿರುತ್ತದೆ. ಗ್ರಾಮೀಣ ಪ್ರದೇಶಗಳ ಸಾರ್ವಜನಿಕ ಪ್ರಯಾಣಿಕರ/ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಸಾರಿಗೆ ಸೇವೆಗಳನ್ನು ಹೆಚ್ಚಿಸಿಕೊಂಡು ಕಾರ್ಯಾಚರಣೆ ಮಾಡಲಾಗುತ್ತಿದೆ.
ಆ	ಕೋವಿಡ್‌ನ ರೂಪಾಂತರಿ ಓಮೈಕ್ರಾನ್ (OMICRON) ಸೋಂಕು ವೈರಾಣು ಹಾವಳಿ ತೀವ್ರವಾಗಿದ್ದರೂ ಸರ್ಕಾರಿ ಬಸ್ಸುಗಳಲ್ಲಿ ಮಾಸ್ಕ್‌ಗಳಿಲ್ಲದೆ, ಒಬ್ಬರ ಮೈಗೆ ಒಬ್ಬರು ತಾಗಿಕೊಂಡು ಸಂಚರಿಸುವುದನ್ನು ತಡೆಯಲು ಯಾವ ಕ್ರಮ ವಹಿಸಲಾಗುತ್ತಿದೆ	ಕೋವಿಡ್‌ನ ರೂಪಾಂತರ ಓಮೈಕ್ರಾನ್ ಸೋಂಕು ವೈರಾಣು ಹಾವಳಿ ತೀವ್ರವಾಗಿರುವ ಹಿನ್ನಲೆಯಲ್ಲಿ ವಾಹನದಲ್ಲಿ ಪ್ರಯಾಣಿಸುವ ಪ್ರಯಾಣಿಕರು ಕಡ್ಡಾಯವಾಗಿ ಮಾಸ್ಕನ್ನು ಧರಿಸುವಂತೆ ಹಾಗೂ ಸಾಮಾಜಿಕ ಅಂತರ ಕಾಪಾಡುವಂತೆ ನಿಗಮದ ಬಸ್ಸು ನಿಲ್ದಾಣಗಳಲ್ಲಿ ಧ್ವನಿ ವರ್ಧಕಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ಅಲ್ಲದೆ, ಬಸ್ಸಿನಲ್ಲಿ ಪ್ರಯಾಣಿಸುವ ಎಲ್ಲಾ ಪ್ರಯಾಣಿಕರು ಮಾಸ್ಕ್ ಧರಿಸಿರುವ ಬಗ್ಗೆ ಖಾತರಿಪಡಿಸಿಕೊಂಡು ವಾಹನ ಕಾರ್ಯಾಚರಿಸುವಂತೆ ಬಸ್ಸಿನ ಚಾಲಕ/ ನಿರ್ವಾಹಕರಿಗೆ ತಿಳಿಸಲಾಗಿರುತ್ತದೆ ಹಾಗೂ ಮಾಸ್ಕ್‌ರಹಿತ ಪ್ರಯಾಣಿಕರಿಗೆ ಪ್ರಯಾಣ ಮಾಡಲು ಅವಕಾಶ ನೀಡಬಾರದೆಂದು ಎಚ್ಚರವಹಿಸಿ ಕೆಲಸ ನಿರ್ವಹಿಸಲು ಅಗಿಂದಾಗ್ಗೆ ಸಂಚಾರ ಸಿಬ್ಬಂದಿಗಳಿಗೆ ಸೂಚಿಸಲಾಗಿದೆ.
ಇ	ಸರ್ಕಾರಿ ಬಸ್ಸುಗಳಲ್ಲಿ ಸ್ವಚ್ಛತೆ ಇಲ್ಲದೆ ಸೋಂಕು ಹರಡಲು ಅವಕಾಶ ನೀಡುವ ಪರಿಸ್ಥಿತಿ ನಿವಾರಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ	ನಿಗಮದಲ್ಲಿನ ಎಲ್ಲಾ ವಾಹನಗಳನ್ನು ಕಾರ್ಯಾಚರಣೆಗೆ ನಿಯೋಜಿಸುವ ಮುನ್ನ ಹಾಗೂ ಕಾರ್ಯಾಚರಣೆಯಾದ ನಂತರ ವಾಹನಗಳ ಒಳಾಂಗಣ ಮತ್ತು ಹೊರಭಾಗ ಪ್ರಯಾಣಿಕರ ಆಸನಗಳು, ಕಿಟಕಿ, ರೈಲ್ ಹಿಡಿಕೆಗಳನ್ನು ತಪ್ಪದೇ ಸೋಡಿಯಂ ಹೈಪೋಕ್ಲೋರೈಡ್ ಮಿಶ್ರಣದೊಂದಿಗೆ ಕಡ್ಡಾಯವಾಗಿ ಸ್ಯಾನಿಟೈಸೇಷನ್/ ಸ್ವಚ್ಛಗೊಳಿಸಲಾಗುತ್ತಿದೆ.